**R.W-1**

**ದಿನಾಂಕಃ 06–11–2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

**ಮುಖ್ಯ ವಿಚಾರಣೆ: 2 ನೇ ಎದುರುದಾರರ ಪರ ಶ್ರೀ. ವಿ ಎಸ್ ಎ ವಕೀಲರಿಂದಃ**

ನಿ.ಆರ್–1 : ಅಧಿಕಾರ ಪತ್ರ,

ನಿ.ಆರ್–2 : ವಿಮಾ ಪಾಲಿಸಿ,

ನಿ.ಆರ್–3 : ಪ್ರಾದೇಶಿಕ ಸಾರಿಗೆ ಕಚೇರಿ ಕೃಷ್ಣಗಿರಿಯವರು ನೀಡಿದ ಉತ್ತರದ ಪ್ರತಿ

ನಿ.ಆರ್–4 : ಆರ್.ಟಿ.ಒ ಕೃಷ್ಣಗಿರಿಯವರು ನೀಡಿದ ಡಿ ಎಲ್ ಎಕ್ಸ್ಟ್ರಾಕ್ಟನ ಪ್ರತಿ

ಎಂದು ಗುರುತಿಸಲಾಯಿತು.

2 ನೇ ಎದುರುದಾರರ ವಿರುದ್ಧ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ .

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ. ಕೆ ಸಿ ಹೆಚ್ ವಕೀಲರಿಂದಃ**

1. ಅಪಘಾತ ಹೊಂದಿದ ವಾಹನಕ್ಕೆ ನಮ್ಮ ಕಂಪನಿಯವರು ನಿ.ಆರ್–2 ರಂತೆ ವಿಮೆ ಪಾಲಸಿ ನೀಡಿರುತ್ತೇವೆ ಎಂದರೆ ಸರಿ. ಸದರಿ ವಿಮೆ ಪಾಲಸಿ ಅಪಘಾತ ಸಮಯದಲ್ಲಿ ಚಾಲ್ತಿಯಲ್ಲಿತ್ತು ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಮಜಕುಗಳಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಕೊಡಲು ನಾವೇ ಬಾಧ್ಯಸ್ಥರಾಗಿರುತ್ತೇವೆ ಎಂದರೆ ಸರಿಯಲ್ಲ. 2019 ರಿಂದ ಇಲ್ಲಿಯವರೆಗೂ ಈ ಕೇಸ್ ನ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**R.W-1**

**<u>ಮರು ವಿಚಾರಣೆಃ ಏನೂ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.